ದಿನಾಂಕ 01.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಎಂ.ಜಿ.ಆರ್. ವಕೀಲರಿಂದಃ-**

ನನ್ನ ತಂದೆಗೆ ಜಯಮ್ಮ ಮತ್ತು ತಂಗಮ್ಮ ಎಂಬ ಇಬ್ಬರು ಪತ್ನಿಯರು. ವಾದಿಯು ಜಯಮ್ಮನ ಮಗಳು. ನಾನು ತಂಗಮ್ಮನ ಮಗಳು. ನನ್ನ ತಂದೆಗೆ ಹೆಬ್ಬಾಲೆ ಮತ್ತು ಅತ್ತೂರು ಗ್ರಾಮಗಳಲ್ಲಿ ಸ್ವಯಾರ್ಜಿತ ಮತ್ತು ಪಿತ್ರಾರ್ಜಿತ ಸ್ವತ್ತುಗಳು ಇದ್ದವು. ವಾದಿಯು ನನಗಿಂತ ಸುಮಾರು 20 ವರ್ಷ ಹಿರಿಯವರು. ನನಗೆ 3 ಜನ ಹೆಣ್ಣು ಮಕ್ಕಳು ಇದ್ದಾರೆ. ವಾದಿಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇದ್ದಾರೆ. ವಾದಿಯ ಗಂಡನ ಮನೆಯ ಕಡೆ ಅನುಕೂಲವಾಗಿದ್ದರು. ನನ್ನ ತಂದೆಯು ಜೀವಂತವಾಗಿರುವರೆಗೂ ಅವರು ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ನಿಡಿ. 13 ರ ದಾಖಲೆಗೆ ವಾದಿಯು ಪಕ್ಷಗಾರಳಾಗಿರುವುದಿಲ್ಲ. ನಿಡಿ. 13 ದಾಖಲೆಗೆ ವಾದಿಯ ಸಹಿಯನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಸದರಿ ದಾಖಲೆಗೆ ವಾದಿಯನ್ನು ಪಕ್ಷಗಾರಳನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ನಾನು ಹೇಗೆ ಹೇಳಲಿ ಎಂದು ಉತ್ತರಿಸಿರುತ್ತಾರೆ. ನಿಡಿ. 13 ದಾಖಲೆಗೆ ವಾದಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡಬಾರದೆಂಬ ಉದ್ದೇಶದಿಂದ ನಿಡಿ. 13 ದಾಖಲೆಯನ್ನು ನಾನು, ನನ್ನ ತಂದೆ-ತಾಯಿ ಸೇರಿಕೊಂಡು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 11.08.1981 ರಂದು ನನ್ನ ತಂದೆಯು ನನಗೆ ಮರಣಶಾಸನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನಿಡಿ. 13 ದಾಖಲೆಯು ಮೋಸದಿಂದ ಕೂಡಿದ ದಾಖಲೆ ಎಂಬ ವಿಚಾರ ನಮಗೆ ಗೊತ್ತಿದ್ದುದ್ದರಿಂದ ಅದನ್ನು ಮರೆಮಾಚುವ ಸಲುವಾಗಿ ನಿಡಿ. 14 ದಾಖಲೆಯನ್ನು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ವಿಭಾಗದಲ್ಲಿ ನನ್ನ ಹಿಸ್ಸೆಗೆ 15 ಎಕರೆ ಜಮೀನು ಬಂದಿರುತ್ತದೆ. ವಿಭಾಗದಲ್ಲಿ ನನ್ನ ಹಿಸ್ಸೆಗೆ ಸುಮಾರು 30 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಉಳಿತಾಯ ಖಾತೆಯಿಂದಾಗಲೀ ಅಥವಾ ನಿಶ್ಚಿತ ಠೇವಣಿಯಿಂದಾಗಲೀ ನನಗೆ ಯಾವುದೇ ಹಣ ನೀಡಿರುವುದಿಲ್ಲ. ನನ್ನ ತಂದೆಯು ನನ್ನ ಮಕ್ಕಳ ಹೆಸರಿನಲ್ಲಿ ತಲಾ ರೂ. 50,000/- ಹಣವನ್ನು ಠೇವಣಿ ಇಟ್ಟಿದ್ದರು. ನಿಡಿ. 15 ನನ್ನ ಬ್ಯಾಂಕಿನ ಖಾತೆಗೆ ಸೇರಿದ ದಾಖಲೆಯಾಗಿದೆ. ನಿಡಿ. 15 ದಾಖಲೆಯಲ್ಲಿ ನಾನು ರೂ.1,50,000/- ಹಣವನ್ನು ವಾದಿಗೆ ನೀಡಿದ ಬಗ್ಗೆ ನಮೂದು ಇದೆ ಎಂದರೆ ಸರಿ. ಸದರಿ ಹಣವನ್ನು ನಾನು ಪ್ರೀತಿಯಿಂದ ವಾದಿಗೆ ನೀಡಿರುತ್ತೇನೆ. ನನ್ನ ತಂದೆಯು ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಇಟ್ಟಿದ್ದ ರೂ. 50,000/- ಹಣವನ್ನು ವಾದಿಯು ಪಡೆದುಕೊಂಡಿರುತ್ತಾರೆ.

ವಾದಿಗೆ ರೂ. 50,000/- ಮತ್ತು ರೂ.2,50,000/- ಹಣವನ್ನು ನೀಡಿರುವ ಬಗ್ಗೆ ನಿಡಿ.32 ರಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಿಡಿ.32 ದಾಖಲೆಯನ್ನು ನೋಂದಣಿ ಮಾಡಿಸಿರುವುದಿಲ್ಲ. ನಿಡಿ.32 ದಾಖಲೆಯನ್ನು ವಾದಿಯು ಬರೆದುಕೊಟ್ಟಿರುವುದಿಲ್ಲ ಹಾಗೂ ಸದರಿ ದಾಖಲೆಗೆ ಆಕೆಯು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 05.11.1994 ರಂದು ನನ್ನ ತಂದೆ ಮೃತರಾಗಿರುತ್ತಾರೆ. ನನ್ನ ತಂದೆಯು ಮೃತರಾದ 13 ನೆಯ ದಿನದಂದು ನಿಡಿ.32 ದಾಖಲೆಯನ್ನು ತಯಾರಿಸಲಾಗುತ್ತದೆ ಎಂದರೆ ಸರಿ. ವಾದಿಯು ನನ್ನ ತಂದೆಯ ಆಸ್ತಿಗಳಲ್ಲಿ ಪಾಲನ್ನು ಕೇಳುತ್ತಾರೆ ಎಂಬ ಉದ್ದೇಶದಿಂದ ನಿಡಿ.32 ದಾಖಲೆಯನ್ನು ನಾನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.33 ದಾಖಲೆಯನ್ನು ವಾದಿಯು ನನಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಡಿ. 33 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ವಾದಿಯ ಹೆಸರಿನಲ್ಲಿ ಜೀಪು ಇದ್ದ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆಯು ವಾದಿಗೆ ಜೀಪನ್ನು

ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.16 ಮತ್ತು 17 ರಲ್ಲಿನ ಬರವಣಿಗೆಗಳು ಒಂದೇ ರೀತಿ ಇವೆ ಎಂದರೆ ಸರಿಯಲ್ಲ. ನಾನು ಈ ದಾವೆಗೋಸ್ಕರ ನಿಡಿ. 16 ಮತ್ತು 17 ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿಃ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

(ಸಾಕ್ಷಿದಾರರ ಸಹಿ)